# VISVESVARAYA TECHNOLOGICAL UNIVERSITY
# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"Jnana Sangama", Belagavi - 590 018, Karnataka State, INDIA

Phone : (0831) 2405468
Fax : (0831) 2405467
Email : registrar@vtu.ac.in
website : www.vtu.ac.in

ಪ್ರೊ॥ಎ.ಎಸ್.ದೇಶಪಾಂಡೆ ಬಿ.ಇ(ಮೆಕ್), ಎಮ್.ಟೆಕ್., ಪಿಹೆಚ್.ಡಿ.
ಕುಲಸಚಿವರು


ಉಲ್ಲೇಖ ಸಂ. : ವಿತಾವಿ/ಪಿಎಸ್/2020-21/ 10686 ದಿನಾಂಕ: 23 MAR 2020

## ಸುತ್ತೋಲೆ

ವಿಷಯ: ಕೋವಿಡ್-19 (ಕೊರೊನಾ ವೈರಸ್) ಹರಡುವಿಕೆ ನಿಯಂತ್ರಿಸುವ ಹಿನ್ನೆಲೆಯಲ್ಲಿ ಕಾಲೇಜುಗಳಿಗೆ ರಜೆ ಘೋಷಿಸುವ ಹಾಗೂ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತು.

ಉಲ್ಲೇಖ: 1) ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು -1), ಬೆಂಗಳೂರು ಇವರ ಪತ್ರ ಸಂಖ್ಯೆ 139 ಯುಎನ್‌ಇ 2020, ದಿ: 23.03.2020.
2) ಮಾನ್ಯ ಕುಲಪತಿಗಳು, ವಿತಾವಿ, ಬೆಳಗಾವಿ ಇವರ ಆದೇಶ, ದಿನಾಂಕ:23.03.2020

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ ತಿಳಿಸುವುದೇನೆಂದರೆ, ವಿಶ್ವವ್ಯಾಪ್ತಿ ಹರಡಿಕೊಂಡಿರುವ ಕೋವಿಡ್ -19 (ಕೊರೊನಾ ವೈರಸ್) ಸಾಮಾಜಿಕವಾಗಿ ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯದ ಮುಖ್ಯ ಆವರಣ, ವಿತಾವಿಯ ಎಲ್ಲ ಪ್ರಾದೇಶಿಕ ಕಚೇರಿಗಳು, ಸ್ನಾತಕೋತ್ತರ ಕೇಂದ್ರಗಳು ಸಂಯೋಜನೆ ಹೊಂದಿದ, ಘಟಕ ಹಾಗೂ ಸ್ವಾಯತ್ತ ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿವರ್ಗದವರಿಗೆ ದಿ:31.03.2020 ರವರೆಗೆ ರಜೆಯನ್ನು ಘೋಷಿಸಲಾಗಿದೆ ಮತ್ತು ಈ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಬೇಕು. ಈ ಅವಧಿಯಲ್ಲಿ ಸಿಬ್ಬಂದಿ ವರ್ಗದವರು ತಮ್ಮ ಕೇಂದ್ರ ಸ್ಥಾನವನ್ನು ಬಿಟ್ಟು ತೆರಳದಂತೆ ಹಾಗೂ ಮನೆಯಿಂದ ಹೊರಬರದಂತೆ ಮತ್ತು ಸಾಮಾಜಿಕ ಅಂತರವನ್ನು ಹಾಗೂ ಶುಚಿತ್ವವನ್ನು ಕಾಪಾಡಿಕೊಳ್ಳಲು ಈ ಮೂಲಕ ಕಟ್ಟುನಿಟ್ಟಾಗಿ ಆದೇಶಿಸಲಾಗಿದೆ. ಬೋಧಕ ಸಿಬ್ಬಂದಿಗಳು ಆನ್‌ಲೈನ ಮೂಲಕ ಬೋಧನೆ ಮತ್ತು ಆನ್‌ಲೈನ ಮೂಲಕ ಮೌಲ್ಯಮಾಪನ ಮಾಡಲು ಅಗತ್ಯವಿರುವ ಪಠ್ಯ ವಸ್ತು ಅಭಿವೃದ್ಧಿ ಪಡಿಸುವುದು, ಮುಂದಿನ ಶೈಕ್ಷಣಿಕ ವರ್ಷಕ್ಕೆ ಅಗತ್ಯವಿರುವ ಪಠ್ಯ ಯೋಜನೆಯನ್ನು ಸಿದ್ಧ ಪಡಿಸುವುದು, ವಿಷಯವಾರು Question Bank ನ್ನು ಸಿದ್ಧಪಡಿಸುವುದು ಹಾಗೂ ವಿದ್ಯಾರ್ಥಿಗಳಿಗೆ ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಂಡು ಆನ್‌ಲೈನ್ ಪಾಠವನ್ನು ಮಾಡಿ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಮನೆಯಿಂದಲೇ ಕಾಲೇಜು ಕರ್ತವ್ಯ ನಿರ್ವಹಿಸಬೇಕು ಮತ್ತು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರ ಸೇವೆ ಅಗತ್ಯಬಿದ್ದಾಗ ಕಡ್ಡಾಯವಾಗಿ ಸೇವೆಗೆ ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ.

ಮುಂದುವರೆದು, ವಸತಿ ನಿಲಯಗಳಲ್ಲಿ ವಿದೇಶಿ/ಯಾವುದೇ ವಿದ್ಯಾರ್ಥಿಗಳಿದ್ದರೆ ಅಲ್ಲಿಯೆ ಉಳಿದುಕೊಳ್ಳಲು ಅಗತ್ಯ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಅವರ ಸುರಕ್ಷತೆಗಾಗಿ ಎಲ್ಲ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳ ಬೇಕೆಂದು ಈ ಮೂಲಕ ಆದೇಶಿಸಲಾಗಿದೆ. ತುರ್ತು ಪರಿಸ್ಥಿತಿಯಲ್ಲಿ ಸಂಪರ್ಕಿಸಲು ಎಲ್ಲ ಸಿಬ್ಬಂದಿವರ್ಗದವರ ಮೊಬೈಲ್ ಸಂಖ್ಯೆ/ಇ-ಮೇಲ್ ವಿಳಾಸ ಗಳನ್ನು ಪ್ರಾಚಾರ್ಯರರು ಪಡೆದುಕೊಳ್ಳಬೇಕು.

For Circulation
23/03/2020

Contd….2…

VISVESVARAYA TECHNOLOGICAL UNIVERSITY
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"Jnana Sangama", Belagavi - 590 018, Karnataka State, INDIA

Phone : (0831) 2405468
Fax : (0831) 2405467
Email : registrar@vtu.ac.in
website : www.vtu.ac.in



ಮುಂದುವರೆದು, ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಸ್ಥಳೀಯ ಜಿಲ್ಲಾಡಳಿತ ಹೊರಡಿಸುವ ನಿರ್ದೇಶನಗಳನ್ನು ಪಾಲಿಸಲು ಸೂಚಿಸಲಾಗಿದೆ. ಕೋವಿಡ್ -19 ಹರಡುವಿಕೆಯ ವಿರುದ್ಧ ಹೋರಾಡಲು ಎಲ್ಲ ಮಹಾವಿದ್ಯಾಲಯಗಳಲ್ಲಿ ಕೋವಿಡ್ -19 ಸಹಾಯ ಕೇಂದ್ರಗಳನ್ನು ತೆರೆದು ಅದಕ್ಕೆ ಒಬ್ಬರನ್ನು ನೋಡಲ್ ಆಫೀಸರನ್ನಾಗಿ ನೇಮಕ ಮಾಡಿ (ಇವರ ಹೆಸರು/ಮೊಬೈಲ್ ಸಂಖ್ಯೆ/ಇ-ಮೇಲ್ ವಿವರಗಳನ್ನು registrar@vtu.ac.in ಗೆ ಕಳುಹಿಸಬೇಕು) ಮತ್ತು ಕಾಲೇಜಿನ ವ್ಯಾಪ್ತಿಯಲ್ಲಿ ಬರುವ ಅತಿಥಿಗೃಹ/ ಕಚೇರಿ/ ವಸತಿ ನಿಲಯಗಳ ವಿವರಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳತಕ್ಕದ್ದು ಮತ್ತು ಇವುಗಳನ್ನು ಸ್ಯಾನಿಟೈಜ ಮಾಡಿ ಅಚ್ಚುಕಟ್ಟಾಗಿ ಇಡಲು ಈ ಮೂಲಕ ಆದೇಶಿಸಲಾಗಿದೆ.

ಆದೇಶದ ಮೇರೆಗೆ,

23.03.2020

ಕುಲಸಚಿವರು

ಇವರಿಗೆ,

1) ಪ್ರಾಚಾರ್ಯರು, ವಿ.ತಾ.ವಿ.ಯ ಎಲ್ಲ ಸಂಯೋಜನೆಹೊಂದಿದ, ಘಟಕ ಹಾಗೂ ಸ್ವಾಯತ್ತ ತಾಂತ್ರಿಕ ಮಹಾವಿದ್ಯಾಲಯಗಳು.
2) ಎಲ್ಲ ವಿಭಾಗಗಳ ಚೇರ್‌ಪರಸನ್/ಪ್ರೋಗ್ರಾಮ್ ಕೋರ್ಡಿನೇಟರ್ ಸ್ನಾತಕೋತ್ತರ ಕೇಂದ್ರ, ವಿ.ತಾ.ವಿ, ಮುದ್ದೇನಹಳ್ಳಿ, ಬೆಳಗಾವಿ, ಕಲಬುರ್ಗಿ ಮತ್ತು ಮೈಸೂರು.
3) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಧಾನ ಕಛೇರಿಯ ಆವರಣದಲ್ಲಿರುವ ಎಲ್ಲಾ ಕಛೇರಿಗಳ ಮುಖ್ಯಸ್ಥರುಗಳಿಗೆ / ವಿಶೇಷಾಧಿಕಾರಿಗಳಿಗೆ.

ಪ್ರತಿ ಇವರಿಗೆ,

1) ಪ್ರಾದೇಶಿಕ ನಿರ್ದೇಶಕರು (ಪ್ರಭಾರಿ), ವಿ.ತಾ.ವಿ.ಯ ಬೆಂಗಳೂರು, ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ಪ್ರಾದೇಶಿಕ ಕೇಂದ್ರಗಳು.
2) ವಿಶೇಷಾಧಿಕಾರಿಗಳು, ಡಿ.ಪಿ.ಎ.ಆರ್, ವಿತಾವಿ, ಬೆಳಗಾವಿ ಮುಂದಿನ ಕ್ರಮಕ್ಕಾಗಿ.
3) ಕುಲಪತಿಗಳ ಕಾರ್ಯದರ್ಶಿಗಳು, ವಿ.ತಾ.ವಿ, ಬೆಳಗಾವಿ.